ಉ) ಆರ್. ಟಿ. ಓ. ಇಲಾಖೆಯು ಸಾರಿಗೆ ಇಲಾಖೆಯು ಒಂದೇ ಆಗಿರುವುದರಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

		YEAR 1998-99		YEAR 1999-2000	
	Month	Passed	Failed	Passed	Failed
1.	April,1998.	52	7	42	10
2.	May	44	13	51	31
3.	June	69	12	58	31
4.	July	62	28	58	21
5.	August	40	11	52	21
6.	September	39	06	49	18
7.	October	43	08	43	05
8.	November	40	29	48	16
9.	December	64	13	80	07
10.	January ,99	60	16	92	30
11.	February	41	13	92	30
12.	March	45	16	-	-

ಶಿವಾಜಿನಗರ ಕ್ಷೇತ್ರದಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ತೆಗೆದುಕೊಂಡ ಕಾಮಗಾರಿ.

1166(91) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಾಜಿನಗರ, ವಿಧಾನ ಸಭಾ ಕ್ಷೇತ್ರದಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ 1999-2000ನೇ ಸಾಲಿನಲ್ಲಿ ಕೈಗೊಂಡಿರುವ ವಿವಿಧ ಕಾಮಗಾರಿಗಳಾವುವು? (ವಿವರ ನೀಡುವುದು)

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ಶಿವಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ಯಾವ ಕಾಮಗಾರಿಯನ್ನು 1999-2000ನೇ ಸಾಲಿನಲ್ಲಿ ಕೈಗೊಂಡಿರುವುದಿಲ್ಲ.

ವಾಹನಗಳಲ್ಲಿ ಎಲ್.ಪಿ.ಜಿ ಅಳವಡಿಸುತ್ತಿರುವುದು

1168 (1410) ಶ್ರೀ ಕಟ್ಟ ಸುಬ್ಬಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ? ಅ) ರಾಜ್ಯದಲ್ಲಿ ವಾಹನಗಳಲ್ಲಿ ಎಲ್ಪಿಜಿ ಅಳವಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ರಾಜ್ಯದಲ್ಲಿ ಪ್ರತಿನಿತ್ಯ ಸರಾಸರಿಎಷ್ಟು ವಾಹನಗಳು (ಅಂದಾಜು) ಈ ರೀತಿ ಎಲ್ಪಿಜಿ ಕಿಟ್ ಅಳವಡಿಸಿಕೊಂಡು ಸಂಚರಿಸುತ್ತಿವೆ.

ಇ) ಇದಕ್ಕೆ ಪರವಾನಗಿ ಇದೆಯೆ?

ಈ) ಇಲ್ಲದಿದ್ದಲ್ಲಿ, ಕೇಂದ್ರ ಸರ್ಕಾರದಿಂದ ಪರವಾನಗಿಯನ್ನು ಪಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು?

ಉ) ಇತ್ತೀಚೆಗೆ ಅಡಿಗೆ ಅನಿಲದ ಬಳಕೆಯಿಂದ ವಾಹನ ಅಪಘಾತಗಳು ಸಂಭವಿಸಿರುವುದು ನಿಜವಲ್ಲವೇ?

ಊ) ಹಾಗಿದ್ದಲ್ಲಿ, ಸರ್ಕಾರ ಇದನ್ನು ತಡೆಗಟ್ಟಲು ಕೈಗೊಂಡ ಕ್ರಮಗಳೇನು?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಹೌದು.

ಆ) ಇಲಾಖೆಯು ಪ್ರತ್ಯೇಕ ಪರವಾನಗಿಗಳನ್ನು ನೀಡುತ್ತಿಲ್ಲವಾದುದರಿಂದ ನಿಖರವಾದ ಮಾಹಿತಿಯು ಇಲಾಖೆಯಲ್ಲಿ ಲಭ್ಯವಿರುವುದಿಲ್ಲ.

ಇ) ಇಲ್ಲ.

ಈ) ಮೋಟಾರು ವಾಹನಗಳಲ್ಲಿ ಎಲ್.ಪಿ.ಜಿ. ಅಳವಡಿಸುವುದನ್ನು ಅನುಮತಿಯಸಲು ಕರ್ನಾಟಕ ಸರಕಾರವು ಕೇಂದ್ರ ಮೋಟಾರು ವಾಹನ ಕಾಯಿದೆ 1988 ರ ಕಲಂ 52ನ್ನು ಹಾಗೂ ಎಲ್ ಪಿ ಜಿ (ಉಪಯೋಗದಲ್ಲಿ ನಿರ್ಭಂದ) ಆಜ್ಞೆ 1974ನ್ನು ತಿದ್ದುಪಡಿ ಮಾಡುವಂತೆ ಕೇಂದ್ರ ಸರ್ಕಾರವನ್ನು ಕೋರಿದೆ.

ಉ) ಹೌದು.

ಊ) ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 34368-74:98, ದಿನಾಂಕ 15-12-1998ರಂದು ಮೋಟಾರುವಾಹನಗಳಲ್ಲಿ ಎಲ್.ಪಿ.ಜಿ. ಬಳಕೆಗೆ ಅನುಮತಿ ಇದೆಯೆಂದು ತೀರ್ಪು ನೀಡಿರುತ್ತದೆ. ಆದುದರಿಂದ ಮೋಟಾರು ವಾಹನ ಮಾಲೀಕರು ಅವರಾಗಿಯೇ ತಮ್ಮ ಮೋಟಾರು ವಾಹನಗಳಲ್ಲಿ ಎಲ್ಪಿಜಿ ಯನ್ನು ಅಳವಡಿಸಿಕೊಂಡಿರುತ್ತಾರೆ. ಸುರಕ್ಷಾ ಕ್ರಮಗಳನ್ನು ಅನುಸರಿಸುವಂತೆ ಎಚ್ಚರಿಕೆ ನೀಡಿ ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಲಾಗಿದೆ. ಕೇಂದ್ರ ಸರ್ಕಾರವನ್ನು ಎಲ್ಪಿಜಿ ಸಿಲಿಂಡರ್‌ಗಳನ್ನು ಅನುಮತಿಸಲು ಬೇಕಾದ ಸುರಕ್ಷಾಪ್ರಮಾಣಗಳನ್ನು ನಿಗದಿಪಡಿಸುವಂತೆ ಸಹಾ ಕೋರಲಾಗಿದೆ.

ಬೆಂಗಳೂರು ನಗರದಲ್ಲಿ ಖಾಸಗಿ ಬಸ್ ನಿಲ್ದಾಣವನ್ನು ನಿರ್ಮಿಸುವುದು

1172 (1424) ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರಕ್ಕೆ ಬರುವ ಹಾಗೂ ಇಲ್ಲಿಂದ ಹೋಗುವ ಖಾಸಗಿ ಬಸ್ಸುಗಳ ನಿಲ್ದಾಣವನ್ನು ಮಿನರ್ವ ಮಿಲ್ ಮೈದಾನದಲ್ಲಿ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?